# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಬಿ.ಜಿ ಪಾಟೀಲ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1042 |
| ಉತ್ತರಿಸಬೇಕಾದ ದಿನಾಂಕ | : | 25.08.2026 |
| ಉತ್ತರಿಸಬೇಕಾದ ಸಚಿವರು | : | ವಸತಿ ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲಬುರಗಿ ಜಿಲ್ಲೆಯ ಅಫಜಲಪೂರ ತಾಲ್ಲೂಕಿನಲ್ಲಿ ಬರುವ ಗೊಬ್ಬೂರು (ಬಿ) ಗ್ರಾಮದ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಶಿವಾಜಿನಗರ, ಗೊಬ್ಬೂರವಾಡಿ ಮತ್ತು ಗೊಬ್ಬುರವಾಡಿ ತಾಂಡಗಳಿಗೆ ದೇವರಾಜ ಅರಸು ವಸತಿ ಯೋಜನೆಯಲ್ಲಿ ನಿರ್ಗತಿಕರು, ವಿಧವೆಯರು ವಿಕಲಚೇತನರು ಹಾಗೂ ಇತರೆ ವರ್ಗದ ವಸತಿ ರಹಿತರಿಗೆ 2020-21ನೇ ಸಾಲಿನಲ್ಲಿ 500 ಮನೆಗಳನ್ನು ಮಂಜೂರು ಮಾಡಿ ಆದೇಶ ಹೊರಡಿಸಿದ್ದರೂ ಇದುವರೆಗೂ ಫಲಾನುಭವಿಗಳಿಗೆ ಮನೆಗಳನ್ನು ಹಂಚಿಕೆ ಮಾಡದಿರಲು ಕಾರಣವೇನು; (ಸಂಪೂರ್ಣ ವಿವರ ನೀಡುವುದು)</td><td>ಕಲಬುರಗಿ ಜಿಲ್ಲೆಯ ಅಫಜಲಪೂರ ತಾಲ್ಲೂಕಿನ ಗೊಬ್ಬೂರ(ಬಿ), ಶಿವಾಜಿನಗರ, ಗೊಬ್ಬೂರುವಾಡಿ ತಾಂಡ ಮತ್ತು ಇನ್ನಿತರ ಪ್ರದೇಶಗಳ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ವಿಧವೆಯರು, ವಿಕಲಚೇತನರು ಹಾಗೂ 14 ವಿಶೇಷ ವರ್ಗದ ವಸತಿರಹಿತರಿಗೆ ಸರ್ಕಾರದ ಆದೇಶ ಸಂಖ್ಯೆವಇ 483 ಹೆಚ್‌ಎಹೆಚ್ 2022, ಬೆಂಗಳೂರು, ದಿನಾಂಕ:24.11.2022ರಲ್ಲಿ ದೇವರಾಜ ಅರಸು ವಸತಿ ಯೋಜನೆ 2020-21ನೇ ಸಾಲಿಗೆ ಒಟ್ಟು 500 ಮನೆಗಳನ್ನು ಮಂಜೂರು ಮಾಡಲಾಗಿರುತ್ತದೆ.<br><br>ಸರ್ಕಾರದ ಆದೇಶದನ್ವಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿ ಮೂಲಕ ನಿಗಮದ ಆನ್‌ಲೈನ್‌ನಲ್ಲಿ ಗುರಿ ನಿಗಧಿಪಡಿಸಲು ಪ್ರಸ್ತಾವನೆಯನ್ನು ಸಲ್ಲಿಸಲು ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಕಲಬುರಗಿ ಜಿಲ್ಲೆ ಇವರಿಗೆ ನಿಗಮದಿಂದ ದಿನಾಂಕ:28.11.2022ರ ಪತ್ರ ಬರೆಯಲಾಗಿರುತ್ತದೆ.<br><br>ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ ಇವರ ದಿನಾಂಕ:23.03.2023ರ ಒಟ್ಟು 3 ಪತ್ರಗಳಲ್ಲಿ ನಿರ್ಗತಿಕರಿಗೆ-422, 08 ವಿಕಲಚೇತನರಿಗೆ ಹಾಗೂ 70 ವಿಧವೆಯರಿಗೆ ಹೀಗೆ ಒಟ್ಟು 500 ಮನೆಗಳ ಗುರಿಯನ್ನು ನಿಗಧಿಪಡಿಸಲು ಜಿಲ್ಲಾ ಸಮಿತಿಯ ಸಭಾ ನಡವಳಿಯೊಂದಿಗೆ ನಿಗಮಕ್ಕೆ ಸಲ್ಲಿಸಿ, ಅನುಮೋದನೆಯನ್ನು ನೀಡಲು ಕೋರಿರುತ್ತಾರೆ. ಅದರಂತೆ ನಡವಳಿಯನ್ವಯ ನಿಗಮದ ಆನ್‌ಲೈನ್‌ನಲ್ಲಿ ಈ ಕೆಳಕಂಡಂತೆ ಗುರಿ ನಿಗಧಿಪಡಿಸಲಾಗಿರುತ್ತದೆ.</td></tr>
<tr><td>ಆ)</td><td>ಜಿಲ್ಲಾಧಿಕಾರಿಗಳ ಜಿಲ್ಲಾ ವಸತಿ ಸಮಿತಿಯಲ್ಲಿ ಫಲಾನುಭವಿಗಳ ಪಟ್ಟಿ ತಯಾರಿಸಿ ಅನುಮೋದನೆ ನೀಡಿರುವ 500 ಮನೆಗಳ ಗುರಿಯನು ತಡೆಹಿಡಿದಿರುವುದನು ತೆರವುಗೊಳಿಸಿ ಬಡ ವಸತಿ ರಹಿತರಿಗೆ ಕಾರ್ಯಾದೇಶ ನೀಡಲು ಸರ್ಕಾರ ಇದುವರೆಗೂ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)</td><td>
<table>
<tr><th>ಶ್ರೇಣಿ</th><th>ಪರಿಶಿಷ್ಟ ಜಾತಿ</th><th>ಪರಿಶಿಷ್ಟ ಪಂಗಡ</th><th>ಸಾಮಾನ್ಯ ವರ್ಗ</th><th>ಅಲ್ಪಸಂಖ್ಯಾತರು</th><th>ಒಟ್ಟು</th></tr>
<tr><td rowspan="3">2020-2021</td><td>149</td><td>0</td><td>189</td><td>84</td><td>422</td></tr>
<tr><td>4</td><td>0</td><td>3</td><td>1</td><td>8</td></tr>
<tr><td>29</td><td>0</td><td>34</td><td>7</td><td>70</td></tr>
<tr><td>ಒಟ್ಟು</td><td>182</td><td>0</td><td>226</td><td>92</td><td>500</td></tr>
</table>
ನಿಗಮದ ಆನ್‌ಲೈನ್‌ನಲ್ಲಿ ನಿಗಧಿಪಡಿಸಲಾಗಿರುವ ಮನೆಗಳ ಗುರಿಯಂತೆ ಅನುಮೋದನೆ ಪಡೆದುಕೊಳ್ಳಲು ಜಿಲ್ಲಾ ಅನುಷ್ಠಾನಾಧಿಕಾರಿಗಳಿಗೆ ತಿಳಿಸಲಾಗಿದೆ.<br><br>ಮಾನ್ಯ ಶಾಸಕರು, ಅಫಜಲಪೂರ ವಿಧಾನಸಭಾ ಮತಕ್ಷೇತ್ರ, ಇವರು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಬರೆದ ದಿನಾಂಕ:17.06.2023ರ ಪತ್ರದಲ್ಲಿ 422 ಅರ್ಹರಲ್ಲದ ನಿರ್ಗತಿಕ ಫಲಾನುಭವಿಗಳಿಗೆ ಆಯ್ಕೆ ಮಾಡಿರುವುದಾಗಿ ತಿಳಿಸಿ ಸದರಿ ಮನೆಗಳ ಮಂಜೂರಾತಿಯನ್ನು ಕೂಡಲೇ ತಡೆಹಿಡಿದು ತನಿಖೆ ನಡೆಸುವಂತೆ ಕೋರಲಾಗಿದೆ. ದಿನಾಂಕ:06.07.2023ರ ನಿಗಮದ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಕಲಬುರಗಿ ಇವರಿಗೆ ಮಾನ್ಯ ಶಾಸಕರ ಪತ್ರದಲ್ಲಿ ತಿಳಿಸಿರುವಂತೆ ಜಿಲ್ಲಾ ಸಮಿತಿಯಲ್ಲಿ ಆಯ್ಕೆಯಾಗಿರುವ 422 ನಿರ್ಗತಿಕ ಫಲಾನುಭವಿಗಳ ಅರ್ಹತೆಯ ಬಗ್ಗೆ ಮರು ಪರಿಶೀಲಿಸಿ ವರದಿ ಮಾಡಲು ಸೂಚಿಸಲಾಗಿತ್ತು.<br><br>ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿಕೋಶ, ಕಲಬುರಗಿ ಇವರು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಬರೆದ ದಿನಾಂಕ20.01.2026ರ ಪತ್ರದಲ್ಲಿ ಫಲಾನುಭವಿಗಳ ಅರ್ಹತೆಯನ್ನು ಪರಿಶೀಲಿಸಲು ತನಿಖಾ ತಂಡ ರಚಿಸಿ, ಫಲಾನುಭವಿಗಳ ಮನೆಗೆ ಭೇಟಿ ನೀಡಿ ಪರಿಶೀಲಿಸಿ, 422 ನಿರ್ಗತಿಕ ಫಲಾನುಭವಿಗಳ ಪೈಕಿ 24 ಫಲಾನುಭವಿಗಳು ವಿವಿಧ ವಸತಿ ಯೋಜನೆಯಡಿ ಮನೆಯನ್ನು ಪಡೆದಿರುವುದು ಕಂಡು ಬಂದಿರುತ್ತದೆ, ಬಾಕಿ ಉಳಿದ ಉಳಿದ 378 ನಿರ್ಗತಿಕ 08 ಅಂಗವಿಕಲರು ಹಾಗೂ 70 ವಿಧವ ಫಲಾನುಭವಿಗಳು ಅರ್ಹರಿದ್ದು, ಸದರಿ ಮನೆಗಳನ್ನು ಸದರಿ ಮನೆಗಳನ್ನು ಹಣ ಪಡೆದು ಹಂಚಿಕೆ ಮಾಡಿರುತ್ತಾರೆ ಎಂಬ</td></tr>
</table>

| | | |
|---|---|---|
| | | ಆರೋಪವು ರುಜುವಾತಾಗಿರುವುದಿಲ್ಲ ಎಂದು ನೀಡಿರುವ ವರದಿಯಂತೆ 24 ಜನ ಫಲಾನುಭವಿಗಳನ್ನು ಹೊರತುಪಡಿಸಿ, 476 ಅರ್ಹ ಫಲಾನುಭವಿಗಳಿಗೆ ತೊಂದರೆಯಾಗುತ್ತಿದೆ. ಈಗಾಗಲೇ ವಿಳಂಬವಾಗಿರುವುದರಿಂದ ಕೂಡಲೇ ತಡೆಹಿಡಿರುವುದರುವ 476 ಮನೆಗಳ ಗುರಿಯನ್ನು ಗೊಬ್ಬುರ(ಬಿ) ಗ್ರಾಮ ಪಂಚಾಯತ್‌ಗೆ ನಿಗಧಿಪಡಿಸಬೇಕು ಮತ್ತು ಅರ್ಹ ಫಲಾನುಭವಿಗಳಿಗೆ ಕಾರ್ಯಾದೇಶ ನೀಡಲು ಸೂಕ್ತ ಕ್ರಮಕೈಗೊಳ್ಳುವಂತೆ ನಿಗಮಕ್ಕೆ ಕೋರಿರುತ್ತಾರೆ.<br><br>ನಿಗಮದಿಂದ ಜಿಲ್ಲಾಧಿಕಾರಿಗಳ ಸಮಿತಿ ಮೂಲಕ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ ಸಲ್ಲಿಸಿದ ಪಟ್ಟಿಗೆ ಅನುಗುಣವಾಗಿ ನಿಗಮದ ಆನ್‌ಲೈನ್‌ನಲ್ಲಿ ಗುರಿ ನಿಗಧಿಪಡಿಸಿ ಗ್ರಾಮ ಪಂಚಾಯತ್ ಮಟ್ಟದಲ್ಲಿ ಫಲಾನುಭವಿಗಳ ವಿವರಗಳನ್ನು ನಮೂದಿಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರ ಮೂಲಕ ನಿಗಮಕ್ಕೆ ಅಂತಿಮ ಅನುಮೋದನೆಗೆ ಸಲ್ಲಿಸಲು ಅನೇಕ ಬಾರಿ ದಿನಾಂಕವನ್ನು ವಿಸ್ತರಿಸಲಾಗಿದ್ದರೂ ಸಹ ಅಂತಿಮ ಅನುಮೋದನೆ ಪಡೆದುಕೊಂಡಿರುವುದಿಲ್ಲ. |
| ಇ) | ಕಲಬುರಗಿ ಉಚ್ಚ ನ್ಯಾಯಾಲಯವು ಈ ಮೇಲ್ಕಂಡ ದೇವರಾಜ ಅರಸು ವಸತಿ ಯೋಜನೆಯ 500 ಮನೆಗಳಿಗೆ ಅನುದಾನ ಬಿಡುಗಡೆ ಮಾಡಿ ಕಾರ್ಯಾದೇಶ ನೀಡುವಂತೆ ಆದೇಶ ನೀಡಿದ್ದು; ನ್ಯಾಯಾಲಯ ನೀಡಿದ ಗಡವು ಮೀರಿದ್ದರೂ ಕ್ರಮ ಕೈಗೊಳ್ಳದಿರಲು ಕಾರಣವೇನು; ಸದರಿ ಆದೇಶವನ್ನು ಯಾವಾಗ ಕಾರ್ಯರೂಪಕ್ಕೆ ತರಲಾಗುವುದು? | ಸದರಿ ಗುರಿಗೆ ಸಂಬಂಧಿಸಿದಂತೆ ಶ್ರೀಮತಿ ತಸ್ಲೀಂ ಬಾನು ಹಾಗೂ ಇತರರು ಮಾನ್ಯ ಉಚ್ಚ ನ್ಯಾಯಾಲಯ, ಕಲಬುರಗಿ ಪೀಠದಲ್ಲಿ ರಿಟ್ ಅರ್ಜಿ ಸಂಖ್ಯೆ:202487/2025ರ ಪ್ರಕರಣ ದಾಖಲಿಸಿರುತ್ತಾರೆ.<br><br>ಮಾನ್ಯ ಉಚ್ಚ ನ್ಯಾಯಾಲಯ, ಕಲಬುರಗಿ ರವರ ದಿನಾಂಕ 18.02.2026 ರ ಆದೇಶದಲ್ಲಿ ಈ ಕೆಳಗಿನಂತೆ ತಿಳಿಸಲಾಗಿರುತ್ತದೆ.<br><br>b. A writ of mandamus is issued directing respondent No.2 to take into consideration the recommendation made by other respondents with regard to the petitioners being beneficiaries of the Devraj Urs Special Category Housing Scheme for the year 2020-21 and provide necessary benefits, funds and work order as applicable within an outer limit of four weeks from the date of receipt of a copy of the order.<br>c. In view of the fact that respondent No.2 is not present, petitioners are permitted to make another representation enclosing the order of this copy along with the recommendations made by the respondents including the recommendation dated 20.01.2026.<br><br>ಈ ಪ್ರಕರಣದಲ್ಲಿ ರಾಜೀವ್ ಗಾಂಧಿ ವಸತಿ ನಿಗಮವು ಎರಡನೇ ಪ್ರತಿವಾದಿಯಾಗಿದ್ದು ನಿಗಮದ ಆನ್‌ಲೈನ್‌ನಲ್ಲಿ ಗ್ರಾಮ ಪಂಚಾಯತ್ ವತಿಯಿಂದ ಫಲಾನುಭವಿಗಳ ಮಾಹಿತಿ/ದಾಖಲೆಗಳನ್ನು ನಮೂದು ಮಾಡಬೇಕಾಗಿರುವುದರಿಂದ ಮಾನ್ಯ ನ್ಯಾಯಾಲಯದ ಆದೇಶದನ್ವಯ ಫಲಾನುಭವಿಗಳ ವಿವರಗಳನ್ನು ನಮೂದಿಸಲು 31.03.2026ರ ವರೆಗೆ ದಿನಾಂಕ ವಿಸ್ತರಿಸಲಾಗಿರುತ್ತದೆ.<br><br>ಮಾನ್ಯ ಶಾಸಕರು, ಅಫಜಲಪೂರ ವಿಧಾನಸಭಾ ಕ್ಷೇತ್ರ, ಕಲಬುರಗಿ ಜಿಲ್ಲೆ ಇವರು ಮಾನ್ಯ ವಸತಿ ಸಚಿವರು ಇವರಿಗೆ ಬರೆದ ದಿನಾಂಕ:06.03.2026ರ ಪತ್ರದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಿಂದ ರಾಜೀವ್ ಗಾಂಧಿ ವಸತಿ ನಿಗಮದ ಸಂಬಂಧಪಟ್ಟ ಅಧಿಕಾರಿಗಳಿಗೆ ನೋಟಿಸ್ ನೀಡಿದ್ದರೂ ಅವರು ನ್ಯಾಯಾಲಯದ ಮುಂದೆ ಹಾಜರಾಗದೆ ತಮ್ಮ ವಾದವನ್ನು ಮಂಡಿಸಿಲ್ಲ. ಇದರಿಂದಾಗಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:08.02.2026ರಂದು ಆದೇಶ ನೀಡಿ ಅರ್ಜಿದಾರರ ಮನವಿಯನ್ನು ಪರಿಗಣಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದೆ ಹಾಗೂ ಅರ್ಜಿದಾರರು ಕಾನೂನುಬಾಹಿರವಾಗಿ ಹಾಗೂ ಅಕ್ರಮವಾಗಿ ತಮ್ಮ ಹೆಸರುಗಳನ್ನು ಫಲಾನುಭವಿಗಳ ಪಟ್ಟಿಯಲ್ಲಿ ಸೇರಿಸಿಕೊಂಡು ಸದರಿ ಯೋಜನೆಯಡಿ ಮನೆ ಮಂಜೂರು ಹಾಗೂ ಕಾಮಗಾರಿ ಆದೇಶ ಪಡೆಯಲು ಪ್ರಯತ್ನಿಸುತ್ತಿದ್ದಾರೆ ಎಂಬ ಅನುಮಾನ ವ್ಯಕ್ತವಾಗಿದೆ. ಆದ್ದರಿಂದ ಈ ವಿಷಯವನ್ನು ಸಂಪೂರ್ಣವಾಗಿ ಪರಿಶೀಲಿಸಿ ಯಾವುದೇ ಅಕ್ರಮ ಅಥವಾ ಅನಿಯಮಿತತೆ ಕಂಡುಬಂದಲ್ಲಿ ಅರ್ಜಿದಾರರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಹಾಗೂ Writ Petition No.202487/2025ನಲ್ಲಿ 18.02.2026ರಂದು ನೀಡಿದ ಆದೇಶದ ವಿರುದ್ಧ ತಕ್ಷಣವೇ Writ Appeal ಸಲ್ಲಿಸುವಂತೆ ಮಾನ್ಯ ಸಚಿವರನ್ನು ಕೋರಿರುತ್ತಾರೆ. |

Writ Petition No.202487/2025 ಕ್ಕೆ ಸಂಬಂಧಿಸಿದಂತೆ ರಾಜೀವ್ ಗಾಂಧಿ ವಸತಿ ನಿಗಮದ ಪರವಾಗಿ ನಿಗಮದ ವಕೀಲರು VC ಮೂಲಕ ಹಾಜರಾಗಿರುತ್ತಾರೆ. ಹಾಗೂ ಮಾನ್ಯ ಉಚ್ಛ ನ್ಯಾಯಾಲಯದ ಆದೇಶದಲ್ಲಿ ತಿಳಿಸಿರುವಂತೆ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜೀವ್ ಗಾಂಧಿ ವಸತಿ ನಿಗಮದಿಂದ ಮಾನ್ಯ ಉಚ್ಛ ನ್ಯಾಯಾಲಯ, ಕಲಬುರಗಿ ಪೀಠದಲ್ಲಿ Review Petition (RP 200073/2026)ಸಲ್ಲಿಸಲಾಗಿದ್ದು, ಸದರಿ ಪ್ರಕರಣವು ವಿಚಾರಣೆ ಹಂತದಲ್ಲಿದೆ.

ಇತೀಚೆಗೆ ಮಾನ್ಯ ಶಾಸಕರು, ಅಫಜಲಪೂರ ವಿಧಾನಸಭಾ ಕ್ಷೇತ್ರ, ಇವರು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಬರೆದ ದಿನಾಂಕ:20.06.2026ರ ಪತ್ರದಲ್ಲಿ ಫಲಾನುಭವಿಗಳ ಆಯ್ಕೆಯಲ್ಲಿ ಭ್ರಷ್ಟಾಚಾರ ಆಗಿರುವುದು ಕಂಡು ಬಂದಿದ್ದು, ಆರ್ಥಿಕ ಸ್ಥಿತಿ ಚೆನ್ನಾಗಿರುವ ಈಗಾಗಲೇ ಮನೆ ಜಮೀನುಗಳನ್ನು ಹೊಂದಿರುವ ಜನರಿಂದ ಹಣವನ್ನು ಪಡೆದು ಆಯ್ಕೆ ಮಾಡಿರುತ್ತಾರೆ ಹಾಗೂ ಈ ವಿಷಯಕ್ಕೆ ಸಂಬಂಧವೇ ಇಲ್ಲದೇ ಇರುವ ಯೋಜನಾ ನಿರ್ದೇಶಕರು, ಜಿಲ್ಲಾನಗರಾಭಿವೃದ್ಧಿ ಕೋಶ, ಕಲಬುರಗಿ ಜಿಲ್ಲೆ ಇವರು ಸಲ್ಲಿಸಿರುವ ವರದಿ ಅಸಿಂಧುವಾಗಿರುವುದರಿಂದ ಕೂಡಲೇ ಮತ್ತೊಮ್ಮೆ ಫಲಾನುಭವಿಗಳನ್ನು ಗುರುತಿಸಿ ಪಾರದರ್ಶಕವಾಗಿ ಮನೆಗಳನ್ನು ಹಂಚಿಕೆ ಮಾಡಿದಲ್ಲಿ ಬಡ ಜನರಿಗೆ ನ್ಯಾಯ ಸಿಗುತ್ತದೆ. ಆದ್ದರಿಂದ ಕೂಡಲೇ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಿಗಮಕ್ಕೆ ಕೋರಿರುತ್ತಾರೆ.

ಮಾನ್ಯ ಶಾಸಕರ ಕೋರಿಕೆಯನ್ವಯ ರಾಜೀವ್ ಗಾಂಧಿ ವಸತಿ ನಿಗಮದಿಂದ ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಕಲಬುರಗಿ ಇವರಿಗೆ ಬರೆದ ದಿನಾಂಕ:20.07.2026ರ ಪತ್ರದಲ್ಲಿ ಜಿಲ್ಲಾ ಸಮಿತಿ ಸಭೆಯಲ್ಲಿ ಆಯ್ಕೆಗೊಂಡಿರುವ 500 (ನಿರ್ಗತಿಕರು-422, ವಿಧವೆಯರು-70, ವಿಕಲಚೇತನರು-8) ಫಲಾನುಭವಿಗಳ ಅರ್ಹತೆಯನ್ನು ಜಿಲ್ಲಾ ಮಟ್ಟದ ಪರಿಶೀಲನಾ ತಂಡದಿಂದ ಮತ್ತೊಮ್ಮೆ ಪರಿಶೀಲಿಸಿ ಫಲಾನುಭವಿವಾರು ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ.

ಅದರಂತೆ ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿಯಿಂದ ಸ್ವೀಕೃತವಾಗುವ ಪರಿಶೀಲನಾ ವರದಿ ಹಾಗೂ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಬಾಕಿಯಿರುವ Review Petition (RP 200073/2026) ರಲ್ಲಿ ಮಾನ್ಯ ಉಚ್ಛ ನ್ಯಾಯಾಲಯವು ಹೊರಡಿಸುವ ಅಂತಿಮ ಆದೇಶದ ನಿರ್ದೇಶನದನ್ವಯ ನಿಗಮದಿಂದ ಮುಂದಿನ ಕ್ರಮವಹಿಸಲಾಗುವುದು.

ಸಂಖ್ಯೆ:ವಇ 332 ಹೆಚ್‌ಎಎಂ 2026

(ಬಿ.ಜೆಡ್. ಜಮೀರ್ ಅಹ್ಮದ್ ಖಾನ್)
ವಸತಿ ಸಚಿವರು